**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂಃ 842/2021**

| **ಚಾಸಾ ಃ** | **1** | **ಪ್ರಾಸಾಃ-** | **1** |
|---|---|---|---|

| | |
|---|---|
| ಹೆಸರು | ಕನ್ಯಾಕುಮಾರಿ |
| ಗಂಡನ ಹೆಸರು | ಶಿವರುದ್ರಯ್ಯ |
| ವಯಸ್ಸು | 53 |
| ಉದ್ಯೋಗ | ವ್ಯವಸಾಯ |
| ವಿಳಾಸ | ವರಗೆರಹಳ್ಳಿ ಗ್ರಾಮ |

- - - - - - - - - - - - - - - - - - - - - - - - - - - - -

**ದಿಃ20.12.2022ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ಆರೋಪಿತರು ನನ್ನ ಸಂಬಂಧಿಕರು. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಆರೋಪಿತರು ಯಾವುದೇ ಕೊಟ್ಟಿ ಖರೀದಿ ಪತ್ರವನ್ನು ಸೃಷ್ಟಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವರಗೆರಹಳ್ಳಿ ಗ್ರಾಮದ ಅಗ್ರಹಾರದಲ್ಲಿರುವ ಸರ್ವೆ ನಂ.52/4 ರಲ್ಲಿ 32 ಗುಂಟೆ ಜಮೀನು ನಮ್ಮ ಕುಟುಂಬದ ಜಮೀನಾಗಿರುತ್ತದೆ. ಈಗಲೂ ಸದರಿ ಜಮೀನು ಈಗ ನನ್ನ ಗಂಡ ಶಿವರುದ್ರಯ್ಯ ಇವರ ಹೆಸರಿನಲ್ಲಿರುತ್ತದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾರು ನಮಗೆ ಮೋಸ ಮಾಡಿರುವುದಿಲ್ಲ. ಯಾವುದೇ ಕ್ರಯಪತ್ರ ಸೃಷ್ಟಿಸಿರುವುದಿಲ್ಲ.

ನಾನು ಆರೋಪಿತರ ವಿರುದ್ದ ಯಾವುದೇ ದೂರನ್ನು ನೀಡಿಲ್ಲ. ನನಗೆ ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಆ ದಾಖಲೆಯು ದೂರಾಗಿದ್ದು, ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ. ನನಗೆ ಈಗ ತೋರಿಸಿದ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಆ ದಾಖಲೆಯು ಪಂಚನಾಮೆಯಾಗಿದ್ದು, ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ನಿಪಿ-1 ಮತ್ತು 2 ರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ.

ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ಅವರಿಗೆ ನಾನು ಮುಂದುವರೆದ ಹೇಳಿಕೆಯನ್ನು ನೀಡಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಎಪಿಪಿ ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.**

**ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ದಿನಾಂಕ.03.08.2016 ರಂದು ನ್ಯಾಯಾಲಯದ ಮುಂದಿರುವ ಆರೋಪಿತರು ಆಗ್ರಹಾರ ಗ್ರಾಮದ ಸರ್ವೆ ನಂ.52/4 ಕ್ಕೆ ಸಂಬಂಧಿಸಿದಂತೆ ಮೃತ ಪಟ್ಟಿರುವ ಆಸಲಿ ಮಾಲೀಕರ ಹೆಸರಿನಲ್ಲಿಯೇ ಜಮೀನಿನ ದಾಖಲೆಗಳು ಇದ್ದು, ಸದರಿ ಜಮೀನನ್ನು

ಅಕ್ರಮವಾಗಿ ಮೋಸದಿಂದ ಲಪಾಟಯಿಸುವ ಉದ್ದೇಶದಿಂದ ಆಸಲಿ ಲೇಟ್ ಬೋಳಶಿವನೇಗೌಡ ಅವರ ಹೆಸರಿನ್ನು ಹೊಂದಿರುವ 2 ನೇ ಆರೋಪಿತನೊಂದಿಗೆ 1 ನೇ ಆರೋಪಿ ಸಂಚು ಮಾಡಿ 2 ನೇ ಆರೋಪಿ ಮೃತ ಪಟ್ಟಿರುವ ಲೇಟ್ ಬೋಳಶಿವನೇಗೌಡನ ಬದಲಾಗಿ ಆಸಲಿ ಬೋಳಶಿವನೇಗೌಡ ನಾನೇ ಎಂದು ತನ್ನ ಮತದಾರರ ಗುರುತಿನ ಚೀಟಿಯಲ್ಲಿ ತಂದೆಯ ಹೆಸರನ್ನು ಕುನ್ನಯ್ಯ ಎಂದು ತಿದ್ದುಪಡಿ ಮಾಡಿ ನಕಲಿ ದಾಖಲೆ ಸೃಷ್ಟಿಸಿ ಅದನ್ನೆ ನಿಜವೆಂದು ನಂಬಿಸಿ ಚಾಸಾ-2 ರವರ ಕುಟುಂಬಕ್ಕೆ ಸೇರಬೇಕಾದ ಜಮೀನನ್ನು 1 ನೇ ಆರೋಪಿಗೆ ಮೋಸದಿಂದ ಸುಳ್ಳು ಕ್ರಯಪತ್ರ ತಯಾರಿಸಿ ಮೋಸ ಮಾಡಿರುತ್ತಾರೆಂದು ನಿಪಿ-1 ರಂತೆ ಪೊಲೀಸರಿಗೆ ದೂರು ನೀಡಿರುತ್ತೇನೆಂದರೆ ಸರಿಯಲ್ಲ.

ದಿನಾಂಕ.07.08.2016 ರಂದು ಬೆಳಿಗ್ಗೆ 11:30 ರಿಂದ 12:00 ಗಂಟೆ ಸಮಯದಲ್ಲಿ ಕನಕಪುರ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಪಂಚರ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಮಾಡಿ ಸಹಿ ಪಡೆಯಲಾಗಿದೆ ಎಂದರೆ ಸರಿಯಲ್ಲ.

ದಿನಾಂಕ.22.08.2017 ರಂದು ಪೋಲೀಸರಿಗೆ ಮರುಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿಗೆ ತನ್ನ ಮರುಹೇಳಿಕೆಯನ್ನು ಓದಿ ಹೇಳಿದ್ದು, ಸಾಕ್ಷಿಯು ತನ್ನ ಮರುಹೇಳಿಕೆಯನ್ನು ತಿರಸ್ಕರಿಸಿದ್ದರಿಂದ ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ಆರೋಪಿತರು ಸಂಬಂಧಿಕರಾದ್ದರಿಂದ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ-**

ಆರೋಪಿ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂಃ 842/2021**

| **ಚಾಸಾ ಃ** | **2** | **ಪ್ರಾಸಾಃ-** | **2** |
|---|---|---|---|

| | |
|---|---|
| ಹೆಸರು | ಶಿವರುದ್ರಯ್ಯ |
| ತಂದೆಯ ಹೆಸರು | ಈರೇಗೌಡ |
| ವಯಸ್ಸು | 68 |
| ಉದ್ಯೋಗ | ವ್ಯವಸಾಯ |
| ವಿಳಾಸ | ವರಗೆರಹಳ್ಳಿ ಗ್ರಾಮ |

- - - - - - - - - - - - - - - - - - - - - - - - - - - - - -

**ದಿಃ20.12.2022ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-1 ನನ್ನ ಹೆಂಡತಿಯಾಗಬೇಕು. ಆರೋಪಿತರು ನನ್ನ ಸಂಬಂಧಿಕರು. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಅಗ್ರಹಾರ ಗ್ರಾಮದ ಸರ್ವೆ ನಂ.52/4 ರಲ್ಲಿ 32 ಗುಂಟೆ ಜಮೀನು ನಮಗೆ ಪಿತ್ರಾರ್ಜಿತವಾಗಿ ಬಂದ ಜಮೀನಾಗಿದ್ದು, ಸದರಿ ಜಮೀನಿನ ಪಹಣಿ ನಮ್ಮ ಹೆಸರಿಗೆ ಮಾಡಿಕೊಂಡಿರುವುದಿಲ್ಲ, ಆದರೆ ನಾನು ಸ್ವಾಧೀನಾನುಭವದಲ್ಲಿ ಇದ್ದುಕೊಂಡು ವ್ಯವಸಾಯ ಮಾಡುತ್ತಿದ್ದೇನೆ. ನಮ್ಮ ತಂದೆ ಲೇಟ್ ಈರೇಗೌಡ 2013 ರಲ್ಲಿ ಮೃತರಾಗಿದ್ದು, ನನ್ನ ತಾತ ಲೇಟ್ ಬೋಳಶಿವನೇಗೌಡ ಈಗ ಅಂದಾಜು 30 ರಿಂದ 40 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಸದರಿ ಲೇಟ್ ಬೋಳಶಿವನೇಗೌಡ ರವರಿಗೆ ಇಬ್ಬರು ಮಕ್ಕಳಿದ್ದು, ನಮ್ಮ ತಂದೆ ಈರೇಗೌಡ ಮೃತಪಟ್ಟಿದ್ದು, ನಮ್ಮ ಚಿಕ್ಕಪ್ಪ ಶಿವನೇಗೌಡ ಬದುಕಿರುತ್ತಾರೆ.

ಸದರಿ ಜಮೀನನ್ನು ನನ್ನ ತಂದೆ ಮತ್ತು ಚಿಕ್ಕಪ್ಪ ಮಾತುಕತೆಯ ಮೂಲಕ ಜಮೀನು ವಿಭಾಗ ಮಾಡಿಕೊಂಡು ಸದರಿ ಜಮೀನಿನಲ್ಲಿ ನಾವು ಸ್ವಾಧೀನದಲ್ಲಿದ್ದುಕೊಂಡು ವ್ಯವಸಾಯ ಮಾಡಿಕೊಂಡಿರುತ್ತೇವೆ. ಸದರಿ ಸರ್ವೆ ನಂಬರ್ ಜಮೀನು ಕುರಿತು ಯಾರು ಮೋಸ ಮಾಡಿರುವುದಿಲ್ಲ. ಸದರಿ ಜಮೀನು ಈಗ ನಮ್ಮ ಹೆಸರಿನಲ್ಲಿದ್ದು, ನಮಗೆ ಯಾರಿಂದಲ್ಲೂ ಮೋಸ ಅಥವಾ ಅನ್ಯಾಯ ಆಗಿರುವುದಿಲ್ಲ.

ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ಅವರಿಗೆ ನಾನು ಹೇಳಿಕೆಯನ್ನು ನೀಡಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಎಪಿಪಿ ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.**

**ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ದಿನಾಂಕ.22.08.2017 ರಂದು ಪೊಲೀಸರು ಅಗ್ರಹಾರ ಗ್ರಾಮದ ಸರ್ವೆ ನಂ.52/4 ರಲ್ಲಿ ಕ್ಷೇತ್ರ 32 ಗುಂಟೆಗೆ ಸಂಬಂಧಿಸಿದಂತೆ ಲಪಟಾಯಿಸುವ ಉದ್ದೇಶದಿಂದ ಗಡ್ಡೆಕೆರೆ ಗ್ರಾಮದ ವಾಸಿ ವೆಂಕಟಚಲಯ್ಯ ರವರ ಮಗ ವೆಂಕಟೇಶ್ ಎಂಬುವವರು ವೆಂಕಟಪ್ಪನದೊಡ್ಡಿ ಗ್ರಾಮದ ಬೋಳಶಿವನೇಗೌಡ ಬಿನ್ ಈರೇಗೌಡ ಹೆಸರಿನಲ್ಲಿರುವ ಚುನಾವಣ ಗುರುತಿನ ಚೀಟಿಯಲ್ಲಿ ತನ್ನ ತಂದೆಯ ಹೆಸರು ಹೀರೇಗೌಡ ಎಂಬುದನ್ನು ತೆಗೆಸಿ ಕುನ್ನಯ್ಯ ಎಂದು ಬದಲಿಸಿ ಸುಳ್ಳು ಚುನಾವಣ ಗುರುತಿನ ಚೀಟಿ ಸೃಷ್ಟಿಸಿ ದಿನಾಂಕ.03.08.2016 ರಂದು ಕನಕಪುರದ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಮೃತಪಟ್ಟಿರುವ ತಮ್ಮ ತಾತ ಲೇಟ್ ಬೋಳಶಿವನೇಗೌಡ ನಾನೇ ಎಂದು ಸುಳ್ಳು ಹೇಳಿ ನಂಬಿಸಿ ನಮ್ಮ ಕುಟುಂಬಕ್ಕೆ

ಸೇರಬೇಕಾಗಿರುವ ಜಮೀನನ್ನು ಮೋಸದಿಂದ ಕ್ರಯಪತ್ರ ಮಾಡಿಕೊಟ್ಟಿರುವ ವಿಚಾರವಾಗಿ ನಾನು ನನ್ನ ಹೆಂಡತಿ ಮುಖೇನ ಠಾಣೆಗೆ ದೂರು ದಾಖಲು ಮಾಡಿದ್ದು, ಸದರಿ ವಿಚಾರ ತಿಳಿದು ತಮ್ಮ ಮೋಸವನ್ನು ಮರೆಮಾಚುವ ದುರುದ್ದೇಶದಿಂದ ಗಡ್ಡೆಗೆರೆ ಗ್ರಾಮದ ವೆಂಕಟೇಶ್ ಎಂಬುವವರು ದಿ.08.08.2016 ರಂದು ಸದರಿ ಕ್ರಯಪತ್ರವನ್ನು ರದ್ದಾಯಿತಿ ಪತ್ರ ಮಾಡಿಸಿರುತ್ತಾರೆ, ಆನಂತರ ವಿಚಾರ ತಿಳಿದು ಸದರಿಯವರ ವಿರುದ್ದ ನನ್ನ ಹೆಂಡತಿ ಕನ್ಯಾಕುಮಾರಿ ಮೂಲಕ ದೂರು ನೀಡಿರುತ್ತೇವೆಂದು ಪೊಲೀಸರಿಗೆ ನಿಪಿ-4 ರಂತೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ.

ಆರೋಪಿತರು ಸಂಬಂಧಿಕರಾದ್ದರಿಂದ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ-</u>**

ಆರೋಪಿ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂಃ 842/2021**

| | | | |
|---|---|---|---|
| **ಚಾಸಾ ಃ** | **6** | **ಪ್ರಾಸಾಃ-** | **3** |

ಹೆಸರು ಸ್ವಾಮಿ ಎಸ್

ತಂದೆಯ ಹೆಸರು ಶಿವರುದ್ರಯ್ಯ

ವಯಸ್ಸು 36

ಉದ್ಯೋಗ ವ್ಯವಸಾಯ

ವಿಳಾಸ ವರಗೆರಹಳ್ಳಿ ಗ್ರಾಮ

- - - - - - - - - - - - - - - - - - - - - - - - - - - - -

**ದಿಃ20.12.2022ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-1 ಮತ್ತು 2 ನನ್ನ ತಾಯಿ ಮತ್ತು ತಂದೆ. ಆರೋಪಿತರು ನನ್ನ ಸಂಬಂಧಿಕರು. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಆರೋಪಿತರು ಯಾವುದೇ ಕೊಟ್ಟಿ ಖರೀದಿ ಪತ್ರವನ್ನು ಸೃಷ್ಟಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವರಗೆರಹಳ್ಳಿ ಗ್ರಾಮದ ಅಗ್ರಹಾರದಲ್ಲಿರುವ ಸರ್ವೆ ನಂ.52/4 ರಲ್ಲಿ 32 ಗುಂಟೆ ಜಮೀನು ನಮ್ಮ ಕುಟುಂಬದ ಜಮೀನಾಗಿರುತ್ತದೆ. ಈಗಲೂ ಸದರಿ ಜಮೀನು ಈಗ ನನ್ನ ತಂದೆ ಶಿವರುದ್ರಯ್ಯ ಇವರ ಹೆಸರಿನಲ್ಲಿರುತ್ತದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾರು ನಮಗೆ ಮೋಸ ಮಾಡಿರುವುದಿಲ್ಲ. ಯಾವುದೇ ಕ್ರಯಪತ್ರ ಸೃಷ್ಟಿಸಿರುವುದಿಲ್ಲ.

ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ಅವರಿಗೆ ನಾನು ಹೇಳಿಕೆಯನ್ನು ನೀಡಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಎಪಿಪಿ ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.**

**ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ದಿನಾಂಕ.18.04.2018 ರಂದು ಪೊಲೀಸರು ಅಗ್ರಹಾರ ಗ್ರಾಮದ ಸರ್ವೆ ನಂ.52/4 ರಲ್ಲಿ ಕ್ಷೇತ್ರ 32 ಗುಂಟೆಗೆ ಸಂಬಂಧಿಸಿದಂತೆ ಲಪಟಾಯಿಸುವ ಉದ್ದೇಶದಿಂದ ಗಡ್ಡೆಕೆರೆ ಗ್ರಾಮದ ವಾಸಿ ವೆಂಕಟಚಲಯ್ಯ ರವರ ಮಗ ವೆಂಕಟೇಶ್ ಎಂಬುವವರು ವೆಂಕಟಪ್ಪನದೊಡ್ಡಿ ಗ್ರಾಮದ ಬೋಳಶಿವನೇಗೌಡ ಬಿನ್ ಈರೇಗೌಡ ಹೆಸರಿನಲ್ಲಿರುವ ಚುನಾವಣ ಗುರುತಿನ ಚೀಟಿಯಲ್ಲಿ ತನ್ನ ತಂದೆಯ ಹೆಸರು ಹೀರೇಗೌಡ ಎಂಬುದನ್ನು ತೆಗೆಸಿ ಕುನ್ನಯ್ಯ ಎಂದು ಬದಲಿಸಿ ಸುಳ್ಳು ಚುನಾವಣ ಗುರುತಿನ ಚೀಟಿ ಸೃಷ್ಟಿಸಿ ದಿನಾಂಕ.03.08.2016 ರಂದು ಕನಕಪುರದ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಮೃತಪಟ್ಟಿರುವ ತಮ್ಮ ತಾತ ಲೇಟ್ ಬೋಳಶಿವನೇಗೌಡ ನಾನೇ ಎಂದು ಸುಳ್ಳು ಹೇಳಿ ನಂಬಿಸಿ ನಮ್ಮ ಕುಟುಂಬಕ್ಕೆ ಸೇರಬೇಕಾಗಿರುವ ಜಮೀನನ್ನು ಮೋಸದಿಂದ ಕ್ರಯಪತ್ರ ಮಾಡಿಕೊಟ್ಟಿರುವ ವಿಚಾರವಾಗಿ ನಾನು ನನ್ನ ಹೆಂಡತಿ ಮುಖೇನ ಠಾಣೆಗೆ ದೂರು ದಾಖಲು ಮಾಡಿದ್ದು, ಸದರಿ ವಿಚಾರ ತಿಳಿದು ತಮ್ಮ ಮೋಸವನ್ನು ಮರೆಮಾಚುವ ದುರುದ್ದೇಶದಿಂದ ಗಡ್ಡೆಗೆರೆ ಗ್ರಾಮದ ವೆಂಕಟೇಶ್ ಎಂಬುವವರು ದಿ.08.08.2016 ರಂದು ಸದರಿ ಕ್ರಯಪತ್ರವನ್ನು ರದ್ದಾಯಿತಿ ಪತ್ರ ಮಾಡಿಸಿರುತ್ತಾರೆ, ಆನಂತರ ವಿಚಾರ ತಿಳಿದು ಸದರಿಯವರ ವಿರುದ್ದ ನನ್ನ ಹೆಂಡತಿ ಕನ್ಯಾಕುಮಾರಿ ಮೂಲಕ ದೂರು ನೀಡಿರುತ್ತೇವೆಂದು ಪೊಲೀಸರಿಗೆ ನಿಪಿ-5 ರಂತೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ.

ಆರೋಪಿತರು ಸಂಬಂಧಿಕರಾದ್ದರಿಂದ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ-**

ಆರೋಪಿ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ 842/2021

| **ಚಾಸಾ ಃ** | **11** | **ಪ್ರಾಸಾಃ-** | **4** |
|---|---|---|---|

| | |
|---|---|
| ಹೆಸರು | ರಾಮಚಂದ್ರ |
| ತಂದೆಯ ಹೆಸರು | ಕುನ್ನೇಗೌಡ |
| ವಯಸ್ಸು | 60 |
| ಉದ್ಯೋಗ | ವ್ಯವಸಾಯ |
| ವಿಳಾಸ | ವರಗೆರಹಳ್ಳಿ ಗ್ರಾಮ |

- - - - - - - - - - - - - - - - - - - - - - - - - - - - - -

**ದಿಃ20.12.2022ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಆರೋಪಿತರು ನನ್ನ ಸಂಬಂಧಿಕರು. ಚಾಸಾ-1, 2 ಮತ್ತು 6 ರವರು ನನ್ನ ಸಂಬಂಧಿಕರು. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ. ನನಗೆ ಈಗ ತೋರಿಸಿದ ಒಂದು ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಆ ದಾಖಲೆಯು ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ನಿಪಿ-2 ರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಎಪಿಪಿ ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.**

**ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ದಿನಾಂಕ.07.08.2016 ರಂದು ಬೆಳಿಗ್ಗೆ 11:30 ರಿಂದ 12:00 ಗಂಟೆ ಸಮಯದಲ್ಲಿ ಕನಕಪುರ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಪಂಚರ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಮಾಡಿ ಸಹಿ ಪಡೆಯಲಾಗಿದೆ ಎಂದರೆ ಸರಿಯಲ್ಲ.

ಆರೋಪಿತರು ಸಂಬಂಧಿಕರಾದ್ದರಿಂದ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ-**

ಆರೋಪಿ ಪರ ವಕೀಲರು ತಮ್ಮ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆ :ಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**